# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:03/08/2016

ಪ್ರಕರಣ ಸಂಖ್ಯೆ: ಆರ್‌ಎ. 34/2014-15

ಉಪಸ್ಥಿತರು: ಡಾ|| ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ರಾಧಮ್ಮ<br>ಕೋಂ ಆನಂದ<br>ಜಯಮಂಗಲ<br>ಟಿ.ಗೊಲ್ಲಹಳ್ಳಿ ಅಂಚೆ<br>ಬಂಗಾರಪೇಟೆ ತಾಲ್ಲೂಕು<br>2. ರತ್ನಮ್ಮ ಕೋಂ ಮುನಿಶಾಮಪ್ಪ<br>ಸ್ವಪ್ನಹಳ್ಳಿ ಗ್ರಾಮ<br>ವಕ್ಕಲೇರಿ ಹೋಬಳಿ<br>ಕೋಲಾರ ತಾಲ್ಲೂಕು<br>( ಶ್ರೀ ವಿ.ಪ್ರಶಾಂತ್<br>-ವಕೀಲರು ರವರಿಂದ) | | 1. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>2. ಸುಂದರಮ್ಮ<br>ಕೋಂ ಲೇಟ್ ಮುನಿಶಾಮಿ<br>3. ರತ್ನಮ್ಮ ಕೋಂ ಮುನಿರೆಡ್ಡಿ<br>4. ಲೋಕೇಶ್ ಬಿನ್ ಲೇಟ್ ಮುನಿಯಪ್ಪ<br>5. ರಮೇಶ್ ಬಿನ್ ಲೇಟ್ ಮುನಿಯಪ್ಪ<br>6. ಸೋಮೇಶ್<br>ಬಿನ್ ಲೇಟ್ ಮುನಿಯಪ್ಪ<br>- ಕ್ರಸಂ 2 ಮತ್ತು 6 ವಾಸ<br>ಪೆಮ್ಮಿಶೆಟ್ಟಿಹಳ್ಳಿ ಗ್ರಾಮ,<br>ವಕ್ಕಲೇರಿ ಹೋಬಳಿ,<br>ಕೋಲಾರ ತಾಲ್ಲೂಕು.<br>( ಶ್ರೀ ಪಿ.ಎಂ. ಮುನಿರಾಜು<br>- ವಕೀಲರು ರವರಿಂದ ) |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ ರವರ ಪ್ರಕರಣ ಸಂಖ್ಯೆ: ಅದಾಲತ್/ಎಸಿ/ಸಿಆರ್/933/2013-14 ದಿನಾಂಕ:04/02/2014 (ಎಂ.ಆರ್. ನಂ. ಹೆಚ್ 23/2013-14 ದಿನಾಂಕ:29/01/2014) ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

## ಪ್ರಸ್ತಾವನೆ.

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 136 ರೊಂದಿಗೆ ಓದಲಾದ ಕಲಂ 49 ರಂತೆ ಸಲ್ಲಿಸಿರುತ್ತಾರೆ.

## ಪ್ರಕರಣದ ಸಂಕ್ಷಿಪ್ತ ವಿವರ,

ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಪೆಮ್ಮಿಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ. 96/1 ರಲ್ಲಿ 2-08 ಎಕರೆ, ಸ.ನಂ. 75/1 ರಲ್ಲಿ 0-31 ಗುಂಟೆ, ಸ.ನಂ. 151 ರಲ್ಲಿ 5-30 ಎಕರೆ, ಸ.ನಂ. 153 ರಲ್ಲಿ 1-35 ಎಕರೆ ಜಮೀನು ಲೇಟ್ ಮುನಿಯಪ್ಪ @ ಸುಗ್ಗನಹಳ್ಳಿ ಮುನಿಯಪ್ಪ ರವರಿಗೆ ಸೇರಿದ್ದು, ಇವರು ಮೃತ ನಂತರ 2 ರಿಂದ 6 ನೇ ಎದುರುದಾರರು ದಿನಾಂಕ:04/02/2014 ರಂದು ನಡೆದ ಕಂದಾಯ ಅದಾಲತ್‌ನಲ್ಲಿ ಅದಾಲತ್ ಅಧಿಕಾರಿಗಳಿಗೆ ಅರ್ಜಿ ನೀಡಿದ ಮೇರೆಗೆ ಕ್ರಮಾಂಕ: ಎಸಿ/ಸಿಆರ್/933/2013-14 ರಂತೆ ಎಂ.ಆರ್.ನಂ.11/2013-14 ದಿನಾಂಕ:29/01/2014 ಹಾಗೂ ಎಂ.ಆರ್.ನಂ.23/2013-14 ರಂತೆ ಖಾತೆ ಬದಲಾವಣೆ ಆಗಿರುತ್ತದೆ. ಈ ಖಾತೆ ಬದಲಾವಣೆ ಆದೇಶವನ್ನು ರದ್ದುಪಡಿಸುವಂತೆ ಕೋರಿ ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸ್ ನೀಡಲಾಯ್ತು.

...2